ತಡಿಕೆಗೆ(ಗೇಟ್) ತೆಂಗಿನಕಾಯಿಗಳನ್ನು ಒಡೆದು ಕೈ ಮುಗಿಯುತ್ತಿದ್ದ ಮಂದಿಯನ್ನು ನೋಡಿದ ದ್ಯಾಮವ್ವಳಿಗೆ ತಡೆಯಲಾಗಲಿಲ್ಲ. 'ನನ್ ಬಾಯೇ ನನ್ ಮೊಮ್ಮಗುನ್ನ ನುಂಗಿಕೆಂಡ್ ಬಿಡ್ತಲ್ಲೇ ಯವ್ವಾ' ಎಂದು ಅಳಲತ್ತಿದಳು.

ಮದ್ದುಮನೆಯೊಳಗೆ ಎಷ್ಟೋ ಮಂದಿಯ ಉಸಿರುಗಳು ಉಳಿಯುವುದನ್ನು, ಅಳಿಯುವುದನ್ನು ನೋಡುತ್ತಾ ಎಷ್ಟೋ ಉಸಿರುಗಳು ಕಾಯುತ್ತಿದ್ದವು. 'ತಂಗಡ್ ಹೋಗ್ಬುಡ್ರಿ ಅಂದಾರ' ಎಂದ ಮಗನ ಮಾತು ಕೇಳಿದ ಗಳಿಗೆಯೇ ಪದೇ ಪದೇ ಮೊಮ್ಮಗನ ನೆನಪಾಗಿ ಉಸಿರು ಏರುಪೇರಾಗಲತ್ತಿತು. ಟಕ್ಕನೇ ಎದ್ದು ಹೋಗಿ ಯಾರಿಗೂ ಹೇಳದೇ ಕೇಳದೇ ಮೊಮ್ಮಗನನ್ನು ಎತ್ತಿಕೊಂಡು ದಡ ದಡನೇ ಬಸ್‌ಸ್ಟ್ಯಾಂಡಿಗೆ ಬಂದಳು.

ಅವ್ವ ಮತ್ತು ಕಿರಣರಿಗೆ ಊಟ ತರಲು ಹೋಗಿದ್ದ ಅಂಜಿನೆಪ್ಪ, ಎಂ.ಎಲ್.ಎ ಹನುಮಂತಪ್ಪನವರು ಊರಿಗೆ ಬರುತ್ತಿರುವುದಕ್ಕೆ ಶುಭ ಕೋರುತ್ತಿದ್ದ ಬೆಂಬಲಿಗರ ದೊಡ್ಡ ಫ್ಲೆಕ್ಸುಗಳಿಂದಾಗಿ ಮರೆಯಾಗಿದ್ದ, ದಾರಿತೋರಿಕೆಯ ಹಲಗೆಗಳು ಕಣ್ಣಿಗೆ ಬೀಳದೇ ಮದ್ದುಮನೆಯ ದಾರಿ ತಪ್ಪಿದ್ದ.

8

## ಸರ್ಕಾರಿ ಕೆಂಪು ಬಸ್ಸು

ಅಜ್ಜಿ ಮೊಮ್ಮಗನನ್ನು ಹತ್ತಿಸಿಕೊಂಡ ಸರ್ಕಾರಿ ಕೆಂಪು ಬಸ್ಸು ಕಲ್ಲೂರಿನತ್ತ ಸಾಗುತ್ತಿತ್ತು. ಕಿರಣ ನೋವುಣ್ಣುತ್ತಾ ಅಜ್ಜಿಯ ಮಡಿಲಲ್ಲಿ ಮುಲುಕುತ್ತಿದ್ದ. 'ನಾನು ತೆಪ್ಪಗ ಇರ್ಬೇಕಿತ್ತು' ಎಂದು ದ್ಯಾಮವ್ವ ಮನಕ್ಕೆ ಮುಟ್ಟುವಂತೆ ಹೇಳಿಕೊಳ್ಳುತ್ತಿದ್ದಳು. ಹಳ್ಳ ದಿನ್ನೆಗಳಲ್ಲಿ ಬಸ್ಸು ಎದ್ದೆದ್ದು ಕುಣಿಯಲತ್ತಿದ್ದು, ಅವಳ ಮಾತಿಗೆ ಹೌದೌದು ಎನ್ನುತ್ತಿರುವಂತಿತ್ತು. ದಾರಿ ಸರಿ ಹೋಗಲು ಎಂ.ಎಲ್.ಎ ಹನುಮಂತಪ್ಪನವರ ಒಂದು ಮಾತು ಸಾಕು; ಆದರೆ, ಅವರು ಕ್ಷೇತ್ರಕ್ಕೆ ಬಂದು ಆರು ತಿಂಗಳಾಗಿದ್ದವು. ಒಂದು ದೊಡ್ಡ ಹಳ್ಳದಲ್ಲಿ ಬಸ್ಸು ಬಿದ್ದು ಎದ್ದ ಹೊಡೆತಕ್ಕೆ ಕಿರಣ ಒಮ್ಮೆ, 'ಯವಾ' ಎಂದು ಮತ್ತೆ ಉಸಿರಾಡದೇ ಸುಮ್ಮನಾಗಿ ಬಿಟ್ಟ. ಇದರ ಅರಿವಿಲ್ಲದ ದ್ಯಾಮವ್ವ ಮೆಲ್ಲಗೆ ಮೊಮ್ಮಗನ ಹೊಟ್ಟೆ ತಟ್ಟುತ್ತಾ ಮಲಗಿಸುತ್ತಿದ್ದಳು. ಹಳ್ಳದಿಣ್ಣೆಗಳಿರುವುದು ಒಳ್ಳೆಯದೇ ಆಯಿತು, ಮೈಯ ಓಲಾಟಕ್ಕೆ ಕಿರಣನ ಉಸಿರು ಹೋಗಿರುವುದು ಬಹಳ ಹೊತ್ತು ಕಳೆದರೂ ಅವನ ಅಜ್ಜಿಗೆ ಗೊತ್ತಾಗುತ್ತಿಲ್ಲ.

9

## ಆಟದ ಮೈದಾನ, ನಮ್ಮೂರ ಸರ್ಕಾರಿ ಕಲಿಮನೆ, ಕಲ್ಲೂರು, ಬಳ್ಳಾರಿ ಕಂಪಣ

ಸಿಮೆಂಟು ಮತ್ತು ಕಲ್ಲುಗಳ ಹಳೆಯ ಉದ್ದನೆಯ ಜಾರುಬಂಡೆಯನ್ನು ಹತ್ತಲು ಮೂರನೇ ತರಗತಿಯ ಕಿರಣ ಮತ್ತು ಗೆಳೆಯರು ಜೋರಾಗಿ ಕೇಕೆ ಹಾಕುತ್ತಾ ಓಡುತ್ತಿದ್ದಾರೆ. ಮುಂದಿದ್ದ ಕಿರಣ ಓಡಿ ಹೋಗಿ ಜಾರುಬಂಡೆಯ ತುದಿ ಮುಟ್ಟಿದ. ಆದರೆ, ಅಲ್ಲಿ ಆಗಲೇ ಬೇರೆ ತರಗತಿಯ ಹುಡುಗ ಜಾರುವುದಕ್ಕೆ ಅಣಿಯಾಗಿ ಕೂತಿದ್ದ. ಅವನು ಜಾರುವುದಕ್ಕೂ ಕಿರಣ ಅವನನ್ನು ಸ್ವಲ್ಪ ದೂಕುವುದಕ್ಕೂ ಸರಿಯಾಯಿತು. ಜಾರಿದ ಹುಡುಗನಿಗೆ, ಜೋಲಿ ತಪ್ಪಿದಂತಾಗಿ 'ಯಪ್ಪೋ' ಎಂದು ಜೋರು ಕೂಗಿಕೊಂಡ. ಆದರೆ, ಏನೂ ಆಗದೇ ನೆಲ ಮುಟ್ಟಿದ್ದ. ಮರುಗಳಿಗೆಯೇ ಕಿರಣನೂ ನೆಲ ಮುಟ್ಟಿದ, ಜೊತೆಗೆ ಗೆಳೆಯರು ಕೂಡ. ನೆಲ ಮುಟ್ಟಿದ್ದ ಕಿರಣ ಎದ್ದು, ಮತ್ತೆ ಜಾರುಬಂಡೆ ಹತ್ತಲು ತಿರುಗಿ ಓಡಲತ್ತಿದಾಗ ಟಕ್ಕನೇ ಅವನ ಕಪಾಳಕ್ಕೆ ಜೋರಾದ ಹೊಡೆತ ಬಿತ್ತು. ಕಿರಣ, 'ಯವ್ವೋ' ಎಂದು ನೋವಿನಲ್ಲಿ ಚೀರಿದ.

ಕಿರಣನಿಗೆ ಒದ್ದಿದ್ದ ಹೆಡ್‌ಮಾಷ್ಟ್ರು ಚಂದ್ರಶೇಖರ್ ಕೆಕ್ಕರಿಸಿಕೊಂಡು ಅವನನ್ನೇ ನೋಡುತ್ತಿದ್ದ. ನೆಲಕ್ಕೆ ಬೀಳದೇ ಎದ್ದು ನಿಂತ ಕಿರಣನಿಗೆ ಎರಡನೇ ಹೊಡೆತ ಇನ್ನೂ ಬಲವಾಗಿ ಬಿತ್ತು. ಬಲ ಗಲ್ಲವನ್ನು ನೆಲಕ್ಕೆ ಮಾಡಿ ಬಿದ್ದ ಕಿರಣನ ಕಣ್ಣು, ಆಟದ ಅಂಗಳದ ಮಣ್ಣಿನೊಳಗಿದ್ದ ಸಣ್ಣ ಕಲ್ಲೊಂದಕ್ಕೆ ಬಡಿದು ಊದಿಕೊಳ್ಳಲತ್ತಿತು. 'ಇನ್ನೊಂದ್ ಸಲ ಈ ಹಲ್ಕಾ ಜಾತಿ ಸೂಳೇಮಗುನ್ ಜೊತೀಗೆ ಆಟ ಆಡಿದ್ರೆ ಸಾಯಿಸ್ಬುಡ್ತೀನಿ ಎಲ್ಲಾವನ್ನ' ಎಂದು ಸುತ್ತಲೂ ಹೆದರುತ್ತಾ ನಿಂತಿದ್ದ ಮಕ್ಕಳನ್ನು ಗದರಿಸಿ ಎಲ್ಲರನ್ನೂ ಓಡಿಸಿದರು.

ಗದ್ದಲ ಕಂಡು ಓಡಿ ಬಂದ ಪದ್ಮನಾಭ ಮೇಷ್ಟ್ರು ಕಿರಣನನ್ನು ಮೇಲೆ ಎಬ್ಬಿಸಿ, ಹೆಡ್‌ಮಾಷ್ಟ್ರನ್ನು ಕೆಕ್ಕರಿಸಿದರು. ಚಂದ್ರಶೇಖರ ಅವರತ್ತ ನೋಡದೇ ಹೋಗಿ ಬಿಟ್ಟ. ಮುಸುರೆ ತಿಕ್ಕುತ್ತಿದ್ದ ಕಿರಣನ ಅಜ್ಜಿ ದ್ಯಾಮವ್ವನಿಗೆ ಸುದ್ದಿ ಮುಟ್ಟಿ, ಓಡಿ ಬಂದು ಎದೆ ಬಡಿದುಕೊಂಡು ಅಳಲತ್ತಿದಳು. ಪದ್ಮನಾಭ ಮೇಷ್ಟ್ರು ಕಿರಣನನ್ನು ಎತ್ತಿಕೊಂಡು ಹತ್ತಿರದ ಸರ್ಕಾರಿ ಪ್ರಥಮ ಚಿಕಿತ್ಸಾ ಕೇಂದ್ರದ ಕಡೆಗೆ ಓಡಲತ್ತಿದರು. ಅವರ ಬಿಳಿ ಅಂಗಿಯು ಕಿರಣನ ಕಿವಿಯು ಸೋರಿಸುತ್ತಿದ್ದ ನೆತ್ತರಿನಿಂದ ಮೆಲ್ಲಗೆ ಕೆಂಪಾಗುತ್ತಿತ್ತು. ●